ಕಥೆ

# ಬಗಾಟಬರಗಿ



**ಭುವನಾ ಹಿರೇಮಠ**

ಕಲೆ: ರಾಮಕೃಷ್ಣ ಸಿದ್ರಪಾಲ

ಅವತ್ತು ಸಂಜಿಕ ಕಲ್ಲೊಳ್ಳಿ ಊರುಕೇರಿ ತುಂಬ ಹಾಲ ಹಣಿಸಿದಂಗ ಬೆಳದಿಂಗಳ ಬಿದ್ದಿತ್ತು. ಕಂಟಿ ಕಾಬಲು, ಬೇಲಿ-ಗೊಟರಿ, ಗಿಡಾ-ನೆಲಾ, ಗುಡಿ-ಗುಂಡಾರಾ, ಮಸೊತ್ತಿ ಚರಚು, ಗುಡಿಸಲು ಮಹಲಿನ ಭೇದವಿಲ್ಲದೆ ಎಲ್ಲಾ ಕಡೆಗೂ ಹರಡಿಕೊಂಡಿತ್ತು. ಹುಡುಗಿಯರೆಲ್ಲ ಬಣ್ಣ ಬಣ್ಣದ ಎಡಿ ವಸ್ತ್ರ, ಕಸೂತಿ ಕರವಸ್ತ್ರ, ಮಖಮಲ್ಲಿನ ಅರಿವಿ ಹಿಂಗ ತಮ್ಮ ತಮ್ಮ ಮನಿಯೊಳಗಿರೊ ಅತೀ ಚಂದದ ರೊಟ್ಟಿ ಅರಿವಿಯೊಳಗೆ ಕರ್ಚಿಕಾಯಿ, ಕರಿಗಡಬು, ಚಜ್ಜಕದ ಹೋಳಿಗಿ, ಹುರಕ್ಕಿ ಹೋಳಿಗಿ, ಎಣ್ಣಿ ಹೋಳಿಗಿ, ಒತ್ತಶ್ಯಾವಿಗಿ, ಮೆಣಸಗಡುಬು, ಸೌತಿಬೀಜ ಹುಗ್ಗಿ, ಗುಳಗಿ ಉಪ್ಪಿಟ್ಟು ಹಿಂಗ ನಾನಾ ನಮೂನಿ ರುಚಿರುಚಿ ತಿಂಡಿ ತಿನಿಸು ಕಟಿಗೊಂಡು; ಗಗ್ಗರಿ ಅಂಗಿ, ಲೇಸಿನ ಸ್ಕರ್ಟು, ಹೆಚ್ಚು ಗೇರಾವು ಇಡಿಸಿ ಹೊಲಿಸಿದ ಚೈನಾಸಿಲ್ಕ್ ಲಂಗಾಬ್ಲೌಜು, ಬಾಳ ಚೆಲಿವ್ಯಾರು ಚಂದಾ ಮಾಮಾಗ ಸೊಂಟದ ಮ್ಯಾಲಿನ ಬೆಳದಿಂಗಳಾ ತೋರಿಸ್ತಾ ಲಂಗಾಡೌಣಿ ಉಟಗೊಂಡು ಗೆಳತ್ಯಾರ ಬಾಗಿಲಿಗೆ ಹೋಗಿ ಒಬ್ಬಾಕಿ ಇಬ್ಬರಾಗಿ ಇಬ್ಬರು ನಾಕಾಗಿ ಹೋಗು ಮುಂದ,

**'ಅಲ್ಲೀಕೇರಿಗಿ ಹೋಗುನು ಬರ್ತೇರೇನ್ರೆ,**
**ಒಲ್ಲದಿದ್ದರ ಅಲ್ಲೇ ಇರ್ತೇರೇನ್ರೆ;**
**ಕಲ್ಲವ್ವ ಮಲ್ಲವ್ವ ಕೂಡಿಕೊಂಡು,**
**ಕಡಬು ಹೋಳಿಗಿ ಮಾಡಿಕೊಂಡು........**
**ಅಲ್ಲೀಕೇರಿಗಿ ಹೋಗುನು ಬರ್ತೇರೇನ್ರೆ,**
**ಇಲ್ಲದಿದ್ದರೆ ಅಲ್ಲೇ ಇರ್ತೇರೇನ್ರೆ'...**

ಅಂತ ಪದ ಹಾಡಿಕೊಂಡು ಆ ಬೆಳದಿಂಗಳ ಏಸಿರಿ ನಡುವ ಗೆಳತ್ಯಾರೆಲ್ಲಾ ವನಪ ವಯ್ಯಾರದೊಳಗ ಬಸವಂದೇವ್ರ ಗುಡಿ ಮುಂದಿನ ಪತ್ರಿಕಟ್ಟಿ ಮುಟ್ಟುದ್ರೊಳಗ ಅಳ್ಳಿಕಟ್ಟಿ ಮ್ಯಾಲಿನ ಬಿಟ್ಟಿ ಮಾವಂದಿರ ವಾರಿಗಣ್ಣಿನ ನೆದರು ಇವರ ಮ್ಯಾಗ ಬೀಳದ ಇರ್ಲಿಲ್ಲ. ಗುಸುಗುಸು ಕಿವಿ ಕಚ್ಚಿಕೊಂಡು ಕಡೀಕೂ ಗುಡಿ ಮುಟ್ಟತಿದ್ರು ವಾರಿಗಿ ಗೆಳತ್ಯಾರೆಲ್ಲಾ. ಮೊದಲು ದೇವರಿಗೆ ಹೋಗಿ ಅಗದಿ ಭಕ್ತಿಲೆ ಕೈ ಮುಗದು ತಮಗ ಏನೇನು ಬೇಕಾದ್ದೆಲ್ಲಾ ಬೇಡಿಕೊಂಡು. ತಮ್ಮ ತಮ್ಮ ಹೊಟ್ಯಾಗಿನ ಸಂಕಟಾ ದೇವರ ಮುಂದ ತೋಡಿಕೊಂಡು ಮಣಕಾಲೂರಿ ಹಣಿ ಹಚ್ಚಿ ಅಂತೂ ನಮಸ್ಕಾರ ಒಪ್ಪಿಸಿದ್ದಾತು. ಇನ್ನೇನಿದ್ರೂ ನೈವೇದ್ಯ ತಯಾರ ಮಾಡಿ ಪೂಜೇರ ಈಸಪ್ಪನ ಕೈಯ್ಯಾಗ ಕೊಟ್ಟು ಪತ್ರಿಕಟ್ಟಿಗೆ ಓಡೂದಷ್ಟ ಬಾಕಿ.

ಈ ಅಲ್ಲೀಕೇರಿ ಗೆಳತ್ಯಾರಲ್ಲಿ ಯಾವುದೇ ಭೇದಭಾವ ಏನಿರ್ಲಿಲ್ಲಾ. ಆದರೂ ಕೆಲವ್ರೊಂದಿಷ್ಟು ಜನ ಪತ್ರಿಕಟ್ಟಿ ಹತ್ತು ಧೈರ್ಯ ಮಾಡಲಿಲ್ಲ. ಆ ಹೊತ್ತಿಗೆ ಗೆಳತ್ಯಾರು ಎರಡು ಹೋಳಾಗಿ ಒಡೆದು ಬಿಟ್ರು. ತಿನಸೆಲ್ಲ ತಿಂದುಂಡು ಸಾಲಿ ಬೋರಿಗೆ ಕೈ ತೊಳಕೊಳ್ಳು ಹೊತ್ತಿಗೆ ಮತ್ತೆಲ್ಲಾ ಒಂದ ಟವಳಿ. ಚಳ್ಳೆ-ಪಿಳ್ಳೆ, ಬಗಾಟ-ಬರಗಿ, ಅತ್ತಿಕಟಗಿ-ಬತ್ತಿಕಟಗಿ ಎಲ್ಲಾ ಆಡುದೆಲ್ಲಾ ಏಕಲದೊಕಲ